# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 926 (1076) |
| 2 | ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ: | : | 12-03-2026 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಆರ್.ಟಿ ನಗರ ಪೊಲೀಸ್ ಠಾಣೆಯಿಂದ ಡಾ\|\| ಬಿ.ಆರ್ ಅಂಬೇಡ್ಕರ್ ಮೆಡಿಕಲ್ ಕಾಲೇಜುವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯಾದ ದಿನ್ನೂರು ಮುಖ್ಯರಸ್ತೆಯನ್ನು ಬಿ.ಬಿ.ಎಂ.ಪಿಯ 2025-26ನೇ ಸಾಲಿನ ಆಯ-ವ್ಯಯದಲ್ಲಿ ಟಿ.ಡಿ.ಆರ್ (Transfer of Development Rights) ಯೋಜನೆಯಡಿ ಅಗಲೀಕರಣಗೊಳಿಸಲಾಗುವುದು ಎಂದು ಘೋಷಿಸಿದ್ದು, ಸದರಿ ಕಾಮಗಾರಿಯ ಪ್ರಸ್ತುತ ಹಂತವೇನು; ಸದರಿ ಅಗಲೀಕರಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಸದರಿ ಕಾಮಗಾರಿಗೆ ಎಷ್ಟು ಎಕರೆ ಭೂಮಿ ಅವಶ್ಯಕತೆ ಇದೆ ಮತ್ತು ಭೂ ಸ್ವಾಧೀನ ಗೊಳ್ಳುವ ಜಾಗದಲ್ಲಿ ದರ ನಿಗದಿಪಡಿಸಲಾಗಿದೆಯೆ; ಇದ್ದಲ್ಲಿ ಪ್ರತಿ ಚದರಡಿಗೆ ಎಷ್ಟು ಮೊತ್ತ ನಿಗದಿಪಡಿಸಲಾಗಿದೆ: | • ಸದರಿ ಯೋಜನೆಗೆ ಸುಮಾರು 601 ಆಸ್ತಿಗಳನ್ನು ಗುರುತಿಸಲಾಗಿದ್ದು, ಸುಮಾರು 33950.00 ಚ.ಮೀ ವಿಸ್ತೀರ್ಣದ (ಸುಮಾರು 8 ಎಕರೆ 15.60 ಗುಂಟೆ ಜಾಗ) ಪ್ರದೇಶ ಅವಶ್ಯಕತೆ ಇರುತ್ತದೆ.<br>• ಪ್ರಸ್ತುತ ಭೂ-ಸ್ವಾಧೀನದ ಪ್ರತಿ ಚದರ ಅಡಿಗೆ ಯಾವುದೇ ಮೊತ್ತ ನಿಗದಿಪಡಿಸಲಾಗಿರುವುದಿಲ್ಲ. |
| ಆ) | ಟ್ಯಾನರಿ ರಸ್ತೆಯನ್ನು (ಟ್ಯಾನರಿ ರಸ್ತೆಯ ಕಸಾಯಿ ಖಾನೆಯಿಂದ ನಾಗವಾರ ದವರೆಗೆ) ಸಹ ಅಗಲೀಕರಣ ಗೊಳಿಸಿ ಅಭಿವೃದ್ಧಿಪಡಿಸಲು ಯೋಚಿಸಲಾಗಿತ್ತು ಈಗ ಅರೆಬಿಕ್ ಕಾಲೇಜಿನ ಬಳಿ ಮೆಟ್ರೋ ಸ್ಟೇಷನ್ ಬರ್ತಿದ್ದು ಮೇಟ್ರೋ ಕಾಮಗಾರಿಯಿಂದಾಗಿ ಪ್ರತಿದಿನವೂ ವಾಹನ ಸವಾರರು ಗಂಟೆಗಟ್ಟಲೆ ಟ್ರಾಫಿಕ್ನಲ್ಲಿ ಸಮಯ ಕಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | • ಟ್ಯಾನರಿ ರಸ್ತೆ ಅಗಲೀಕರಣಕ್ಕೆ ರಸ್ತೆಯ ಇಕ್ಕೆಲಗಳ ಖಾಸಗಿ ಭೂಮಾಲೀಕರು ಟಿ ಡಿ ಆರ್ ಆಧಾರದಲ್ಲಿ ಭೂಮಿ ಬಿಟ್ಟುಕೊಡಲು ಒಪ್ಪಿರುವುದಿಲ್ಲ.<br>• ಭೂಸ್ವಾಧೀನಪಡಿಸಿಕೊಳ್ಳಲು ರೂ.300.00 ಕೋಟಿಗೂ ಅಧಿಕ ಮೊತ್ತ ಬೇಕಾಗುವುದಾಗಿ ಅಂದಾಜಿಸಿದ ಹಿನ್ನೆಲೆಯಲ್ಲಿ ಸದರಿ ಯೋಜನೆಯನ್ನು ಪ್ರಾರಂಭಿಸಲಾಗಿರುವುದಿಲ್ಲ. |

| | | |
|---|---|---|
| ಇ) | ಬಂದಿದ್ದಲ್ಲಿ ಈ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಪರ್ಯಾಯ ರಸ್ತೆ ವ್ಯವಸ್ಥೆ ಕಲ್ಪಿಸಲಾಗಿದೆಯೇ; ಈ ಮೆಟ್ರೋ ಮಾರ್ಗ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂಬುದರ ಬಗ್ಗೆ ಮಾಹಿತಿ ನೀಡುವುದು? | • ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಲು ಸದರಿ ರಸ್ತೆಯ ಅಗಲಕ್ಕೆ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.<br>• ಈ ಮೆಟ್ರೋಮಾರ್ಗ ಕಾರ್ಯಾರಂಭವನ್ನು 2026-27ನೇ ಸಾಲಿನಲ್ಲಿ ಯೋಜಿಸಲಾಗಿದೆ. |

**ಸಂಖ್ಯೆ:ನಅಇ 55 ಬಿಬಿಎಲ್ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**